ಚೆಗುವೆರಾ ನಿಧನರಾಗುವ ಹೊತ್ತಿಗೆ ಡಿಯೆಗೊ ಮರಡೋನಾ ಇನ್ನೂ ಆರರ ಬಾಲಕ. ಮರಡೋನಾ ತೋಳಿನ ಮೇಲೆ ಚೆಗುವೆರಾ ಹಚ್ಚೆಯಾದ. ಈಗ ಸಾಕರ್ ದಿಗ್ಗಜ ಡಿಯೆಗೊ ಇನ್ನಿಲ್ಲವಾದಾಗ ಜಗತ್ತಿನಾದ್ಯಂತ ಅವರ ಹಚ್ಚೆ ಹಾಕಿಸಿಕೊಂಡಿರುವ ಅದೆಷ್ಟು ಜನರು ಇರಬಹುದು? ಗಣಿತ ಸಾಧ್ಯವಿಲ್ಲ.

ಬ್ರೆಜಿಲ್ ಪಾಲಿಗೆ ಪೆಲೆ ಹೇಗೋ ಅರ್ಜೆಂಟೀನಾ ಪಾಲಿಗೆ ಡಿಯೆಗೊ ಮರಡೋನಾ. ಈ ಇಬ್ಬರೂ ವಿಶ್ವದ ಕ್ರೀಡಾನಭದ ತಾರೆಗಳು. ಪೆಲೆ ಕಪ್ಪು ಆಟಗಾರ. 1.73 ಮೀಟರ್ ಎತ್ತರದ ಆಸಾಮಿ. ಮರಡೋನಾ ಕಪ್ಪಲ್ಲ, 1.65 ಮೀಟರ್ ಅಷ್ಟೇ ಎತ್ತರ. ವಾಮನನಂತೆ ಕಂಡರೂ ಪ್ರತಿಭೆಯಲ್ಲಿ ತ್ರಿವಿಕ್ರಮ. ಇಬ್ಬರೂ ಆಟಗಾರರು ಧರಿಸಿದ್ದು 10ನೇ ನಂಬರ್‌ನ ಜೆರ್ಸಿ. ಪೆಲೆ ತನ್ನ ದೇಶಕ್ಕೆ ವಿಶ್ವಕಪ್ ದಕ್ಕಿಸಿಕೊಡಲು ಅದ್ಯಾವ ರೀತಿ ಬೆವರು ಬಸಿದಿದ್ದರೋ ಮರಡೋನಾ ಕೂಡ ಅಂತೆಯೇ ಬಿಸಿಯುಸಿರು ಹೊಮ್ಮಿಸಿ, ಅರ್ಜೆಂಟೀನಾ ಕೂಡ ಬ್ರೆಜಿಲ್‌ನಷ್ಟೇ ಪ್ರಭಾವಿ ಎನ್ನುವುದನ್ನು ತೋರಿಸಿಕೊಟ್ಟರು. ಮಣ್ಣಲ್ಲಿ ಬಿದ್ದಿದ್ದ ಈ ಇಬ್ಬರೂ ಮುಗಿಲಲ್ಲಿ ಎದ್ದವರು. ಬಡತನ ಹಾಸುಹೊದ್ದು ಬೆಳೆದವರಿವರು. ಆಮೇಲೆ ಐಷಾರಾಮ, ಅರಮನೆಯಂಥ ನಿವಾಸ ವಾಸ. ಆಟದ ಚುರುಕುತನದಲ್ಲೂ ಇಬ್ಬರಿಗೂ ಸಾಮ್ಯಗಳಿದ್ದವು. ವ್ಯತ್ಯಾಸ ಇದ್ದದ್ದು ಬದುಕು ಹಾಗೂ ಆಟದ ಕುರಿತ ಶಿಸ್ತಿನ ವಿಷಯದಲ್ಲಿ. ಪೆಲೆ ಮೇಷ್ಟ್ರರಂತೆ ಕಂಡರೆ, ಮರಡೋನಾ ಪ್ರತಿಭಾವಂತ ಹುಂಬನಂತೆ ಪ್ರಕಟಗೊಂಡರು. 'ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ' ಎನ್ನುವ ಗಾದೆಯನ್ನು ಮರಡೋನಾಗೆ ಅನ್ವಯಿಸಿದರೆ, 'ಕುಂಬಾರನಿಗೆ ವರುಷ ಕುಂಬಾರನಿಗೇ ನಿಮಿಷ' ಎನ್ನಬೇಕಾದೀತು. ಅವರು ಆಟದ ಅಮಲನ್ನಷ್ಟೇ ಏರಿಸಿಕೊಳ್ಳಲಿಲ್ಲ, ಮಾದಕದ್ರವ್ಯಗಳ ಚಟವನ್ನೂ ಹತ್ತಿಸಿಕೊಂಡರು. ರೆಫರಿಗಳ ಕಣ್ಣಿಗೆ ಕಂಡೂ ಕಾಣದಂತಹ ಮೋಸದ ವರಸೆಗಳನ್ನು ಆಟದಲ್ಲಿ ತೋರಿದರು. ಹೇಗಾದರೂ ಸರಿ, ಗೆಲ್ಲಲೇಬೇಕು ಎನ್ನುವ ಬಿಸಿರಕ್ತದ ಹುಡುಗರ ಬಯಕೆಯೇ ಹಾಗೆ.

ಅರ್ಜೆಂಟೀನಾದ ರಾಜಧಾನಿ ಬ್ಯೂನಸ್ ಐರಿಸ್. ವಿಲ್ಲ ಫಿಯೊರಿಟೋ ಬ್ಯಾರಿಯೋ ಅಲ್ಲಿನ ಕೊಳೆಗೇರಿ. ಕಾರ್ಖಾನೆಯಲ್ಲಿ ದುಡಿಯುತ್ತಿದ್ದ ಅಸಂಖ್ಯ ನೌಕರರಲ್ಲಿ ಒಬ್ಬನಿಗೆ ಎಂಟು ಮಕ್ಕಳು. ಅವರಲ್ಲಿ ಡಿಯೆಗೊ ಮರಡೋನಾ ಕೂಡ ಒಬ್ಬ. 1961ರಲ್ಲಿ ಹುಟ್ಟಿದ ಭವಿಷ್ಯದ ಸಾಕರ್ ಪ್ರತಿಭೆಗೆ ಆಡಲು ಆಟಿಕೆಗಳು ಇರಲಿಲ್ಲ. ಸಾಕರ್ ನೋಡಬೇಕು. ಅದನ್ನೇ ಆಡಬೇಕು. ದೇಹದ ನರನರಗಳನ್ನೂ ಅಲ್ಲಾಡಿಸುವ ಈ ಆಟ ಜಗತ್ತಿನ ಹಲವು ದೇಶಗಳ ಪಾಲಿಗೆ ಪ್ರತಿಷ್ಠೆ. ಇದರ ಮುಂದೆ ಕ್ರಿಕೆಟ್ ಜನಪ್ರಿಯತೆ ಏನೇನೂ ಇರಲಿಲ್ಲ. ಜನ್ಮಜಾತ ಸಾಕರ್ ಪ್ರತಿಭೆ ಡಿಯೆಗೊ ಬಾಲ್ಯದಿಂದಲೂ ಕಾಲ್ಚಳಕ ತೋರುತ್ತಾ ಬಂದದ್ದೇ ಓದಿನಲ್ಲಿ ನಿರಾಸಕ್ತಿ ತಳೆದರು. ಲಾಸ್ ಸೆಬೊಲಿಟಾಸ್ ಕ್ಲಬ್ ಸೇರಿದ ಮೇಲೆ ಸಿಕ್ಕಿದ್ದು ಮರೆಯಲಾಗದ ಸಾಣೆ. ಬೆಳೆಯುವ ಪೈರು ಮೊಳಕೆಯಲ್ಲೇ...ನಿಜ. ಆ ಕ್ಲಬ್‌ನಲ್ಲಿ ಡಿಯೆಗೊ ಆಡಿದ ತಂಡ ಸತತ 136 ಪಂದ್ಯಗಳಲ್ಲಿ ಗೆಲುವು ಸಾಧಿಸಿತು. 16 ವರ್ಷ 120 ದಿನಗಳಷ್ಟು ಚಿಕ್ಕ ವಯಸ್ಸಿನಲ್ಲೇ ಅಂತರರಾಷ್ಟ್ರೀಯ ಪಂದ್ಯಕ್ಕೆ ಪದಾರ್ಪಣೆ ಮಾಡುವ ಅವಕಾಶ ಸಿಗಲು ಇನ್ನೇನು ಬೇಕು?



ಮರಡೋನಾ ಅಗಲಿದ ನಂತರ ಕೋಲ್ಕತ್ತದ ಅಭಿಮಾನಿಯೊಬ್ಬ ಅವರ ಪ್ರತಿಮೆಗೆ ಗೌರವ ಸಲ್ಲಿಸಿ, ಶ್ರದ್ಧಾಂಜಲಿ ಅರ್ಪಿಸಿದ ಕ್ಷಣ



ಅರ್ಜೆಂಟಿನಾ ಪರವಾಗಿ ಆಡಿದ 91 ಪಂದ್ಯಗಳಲ್ಲಿ 34 ಗೋಲುಗಳನ್ನು ಮರಡೋನಾ ಗಳಿಸಿದರೆನ್ನುವುದು ಅವರು ಏರಿಳಿತದ ವೃತ್ತಿಬದುಕಿಗೆ ಪಕ್ಕಾ ಕನ್ನಡಿಯನ್ನೇನೂ ಹಿಡಿಯುವುದಿಲ್ಲ. ಮೆಕ್ಸಿಕೊದಲ್ಲಿ 1986ರಲ್ಲಿ ತಮ್ಮ ದೇಶಕ್ಕೆ ವಿಶ್ವಕಪ್ ಗೆದ್ದುಕೊಟ್ಟ ಮರಡೋನಾ, ನಾಲ್ಕು ವರ್ಷಗಳಾದ ಮೇಲೆ ಮತ್ತೆ ಅಂಥದ್ದೇ ಟೂರ್ನಿಯಲ್ಲಿ ಫೈನಲ್ ಪ್ರವೇಶಿಸಲು ತಮ್ಮ ತಂಡದ ಬೆನ್ನೆಲುಬಾದದ್ದು ಮೆಲುಕುಹಾಕುವ ಸಂಗತಿ.

ಅದಕ್ಕೂ ಮೊದಲು 1978ರಲ್ಲಿ ನಡೆದ ವಿಶ್ವಕಪ್‌ನಲ್ಲಿ ತಂಡಕ್ಕೆ ಮರಡೋನಾ ಆಯ್ಕೆಯಾಗಿದ್ದರೂ ಕೋಚ್ ಆಡುವ ಅವಕಾಶವನ್ನು ಕಲ್ಪಿಸಿಕೊಡಲಿಲ್ಲ. ತವರಿನಲ್ಲೇ ನಡೆದ ಆ ವಿಶ್ವಕಪ್ ಅನ್ನು ಅರ್ಜೆಂಟೀನಾ ಎತ್ತಿಹಿಡಿಯಲು ಕಾರಣರಾಗಿದ್ದು ಮಾರಿಯೋ ಕೆಂಪ್ಸ್. ತಮ್ಮ ದೇಶ ಗೆದ್ದರೂ ಮರಡೋನಾ ತಾವು ಆಡಲಿಲ್ಲವಲ್ಲ ಎಂದು ಕಣ್ಣಾಲಿಗಳಲ್ಲಿ ನೀರು